ಅ) ಉಡುಪಿ ತಾಲ್ಲೂಕಿನ ಕೆಳಕ್ಕಳಬೆಟ್ಟು ಉದ್ಯಾವರ ಹಾಗೂ ಪುತ್ತೂರಿನಲ್ಲಿ ಕಂದಾಯ ಇಲಾಖೆಯ ಸ್ವಾಧೀನದಲ್ಲಿರುವ ಸರ್ಕಾರಿ ಜಮೀನಿನ ಅಕ್ರಮಣವನ್ನು ತೆಗೆಯಲಾಗುವುದೆಂದು ಸರ್ಕಾರದವರು ಆಶ್ವಾಸನೆ ನೀಡಿರುವುದು ನಿಜವೇ

ಆ) ಹಾಗಿದ್ದರೆ, ಈ ಬಗ್ಗೆ ಕ್ರಮ ಕೈಗೊಳ್ಳಲು ನಿಧಾನ ನೀತಿ ಅನುಸರಿಸುವುದಕ್ಕೆ ಕಾರಣಗಳೇನು ?

ಶ್ರೀ ಆರ್.ಎಲ್. ಜಾಲಪ್ಪ (ಕಂದಾಯ ಸಚಿವರು) :

ಅ) ಹೌದು

ಆ) ಈ ಪ್ರಕರಣಗಳಲ್ಲಿ ಕಾನೂನಿನ್ವಯ ಕ್ರಮ ಜರುಗಿಸಲಾಗುತ್ತಿದ್ದು, ವಿಳಂಬ ನೀತಿಯನ್ನು ಅನುಸರಿಸಿಲ್ಲ.

ಶ್ರೀ ಯು.ಆರ್. ಸಭಾಪತಿ : ಮಾನ್ಯ ಅಧ್ಯಕ್ಷರೆ, ರಾಷ್ಟ್ರೀಯ ಹಾಗೂ ರಾಜ್ಯ ಹೆದ್ದಾರಿಗಳಲ್ಲಿ, ರಸ್ತೆ ಬದಿಯಲ್ಲಿ ರೋಡ್ ಮಾರ್ಜಿನ್‌ಗಳು ಏನು ಇವೆ ಅಲ್ಲಿ ಸಾಕಷ್ಟು ರೀತಿಯ ಅಕ್ರಮಗಳು ನಡೆದಿವೆ. ಇದರ ಬಗ್ಗೆ ಸಂಬಂಧಪಟ್ಟ ಅಧಿಕಾರಿಗಳನ್ನು ಕೇಳಿದರೆ ಅದರ ಅಕ್ರಮಣ ತೆಗೆಯುವರು ಕಂದಾಯ ಅಧಿಕಾರಿಗಳೋ ಅಥವಾ ಸಂಬಂಧಪಟ್ಟ ಇಲಾಖಾಧಿಕಾರಿಗಳೋ ಏನೋ ಎನ್ನುವ ಬಗ್ಗೆ ಜಿಜ್ಞಾಸೆ ವ್ಯಕ್ತಪಡಿಸಿದ್ದಾರೆ. ಇದರ ಬಗ್ಗೆ ನನಗೆ ಸ್ಪಷ್ಟವಾದ ಒಂದು ಮಾಹಿತಿ ಬೇಕಾಗಿದೆ.

ಶ್ರೀ ಆರ್.ಎಲ್. ಜಾಲಪ್ಪ : ಮಾನ್ಯ ಅಧ್ಯಕ್ಷರೆ, ರಾಷ್ಟ್ರೀಯ ಹೆದ್ದಾರಿಯಲ್ಲಿ ಒಂದು ಸೆಂಟರ್‌ನಿಂದ ಸ್ಟಡಿ ಎಂದು ಮಾರ್ಜಿನ್ ಇದೆ. ಅಷ್ಟರೊಳಗೆ ಬರುವುದನ್ನೆಲ್ಲಾ ರಾಷ್ಟ್ರೀಯ ಹೆದ್ದಾರಿಯವರು ತೆಗೆಸಬೇಕು.

ಶ್ರೀ ಯು.ಆರ್. ಸಭಾಪತಿ : ಅವರಲ್ಲಿ ಕೇಳಿದಾಗ ಅವರು ಸ್ಪಷ್ಟವಾಗಿ ಹೇಳುತ್ತಿದ್ದಾರೆ. ಅದನ್ನು ಕಂದಾಯ ಇಲಾಖೆಯವರೇ ಮಾಡಬೇಕು, ನಮ್ಮಿಂದ ಆಗುವುದಿಲ್ಲ ಎನ್ನುವ ಮಾತನ್ನು ಹೇಳಿದ್ದಾರೆ. ಅದಕ್ಕಾಗಿ ತಾವು ಸೂಕ್ತವಾದ ನಿರ್ದೇಶನವನ್ನು ಸಂಬಂಧಪಟ್ಟ ಇಲಾಖೆಯವರಿಗೆ ಕಳಿಸುತ್ತೀರಾ ?

ಶ್ರೀ ಆರ್.ಎಲ್. ಜಾಲಪ್ಪ : ತಿಳಿಸುತ್ತೇವೆ. ನಮ್ಮದೇ ಒಂದು ಕಾಲೇಜಿನ ಎದುರುಗಡೆ ಅನ್‌ಅಥರೈಸ್ಡ್ ಕನಸ್ಟ್ರಕ್ಷನ್ಸ್ ರಸ್ತೆಯ ಪಕ್ಕದಲ್ಲಿ ಬಂದಾಗ ನಾನು ಅವರಿಗೆ ಹೇಳಿ ರಿಮೂವ್ ಮಾಡಿಸಿ ಎಂದು ನಾವು ರಿಮೂವ್ ಮಾಡಿಸುವುದಕ್ಕೆ ಹೋಗಲಿಲ್ಲ. ಬೇಕಾದರೆ ಇನ್ನೊಂದು ಸಾರಿ ಅವರ ಹತ್ತಿರ ಮಾತನಾಡುತ್ತೇವೆ. ನಮ್ಮ ಕರ್ತವ್ಯ ಇದ್ದರೆ ನಾವು ಮಾಡುತ್ತೇವೆ. ಅವರ ಕರ್ತವ್ಯ ಇದ್ದರೆ ಅವರು ಕೆಲಸ ಮಾಡಬೇಕು.

ರಾಜ್ಯದಲ್ಲಿ ಸಾವಯವ ಗೊಬ್ಬರದ ಉಪಯೋಗ

469 - ಶ್ರೀ ಬಿ.ಬಿ. ಜಯಚಂದ್ರ (ಕಳ್ಳಂಬೆಳ್ಳ) : ಮಾನ್ಯ ಕೃಷಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ರಾಜ್ಯದಲ್ಲಿ ಸಾವಯವ ಗೊಬ್ಬರ ಉಪಯೋಗವನ್ನು ಎಷ್ಟು ಜನ ರೈತರು ಮಾಡುತ್ತಿರುವರು.

ಆ) ಈ ಬಗ್ಗೆ ಸಮಗ್ರ ಪ್ರಚಾರಾಂದೋಳನ ಮಾಡಲು ಸರ್ಕಾರ ಜರುಗಿಸಿರುವ ಕ್ರಮಗಳೇನು ?

ಶ್ರೀ ಸಿ. ಬೈರೇಗೌಡ (ಕೃಷಿ ಸಚಿವರು) :

ಅ) ರಾಜ್ಯದಲ್ಲಿ ಸಾವಯವ ಗೊಬ್ಬರದ ಉಪಯೋಗವನ್ನು ಮಾಡುವ ರೈತರ ಬಗ್ಗೆ ಸ್ಪಷ್ಟ ಅಂಕಿ ಅಂಶ ನೀಡಲು ಸಾಧ್ಯವಾಗದಿದ್ದರೂ ಇದು ದಿನದಿಂದ ದಿನಕ್ಕೆ ಸಾಕಷ್ಟು ಹೆಚ್ಚುತ್ತಿದೆ.

ಅ) ಉತ್ಪಾದನೆ ಮತ್ತು ಬಳಕೆಯ ಎರಡು ಹಂತಗಳಲ್ಲಿ ಇಲಾಖೆಯ ಸಿಬ್ಬಂದಿಯವರ ಮುಖಾಂತರ ಪ್ರಚಾರ ಕಾರ್ಯ , ತರಬೇತಿ, ಪ್ರಾತ್ಯಕ್ಷಿಕೆ ಮತ್ತು ಸಹಾಯಧನ ನೀಡುವಿಕೆ ಇತ್ಯಾದಿಗಳ ಬಗ್ಗೆ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ.

ಶ್ರೀ ಟಿ.ಬಿ. ಜಯಚಂದ್ರ : ಮಾನ್ಯ ಅಧ್ಯಕ್ಷರೆ, ನನ್ನ ಪ್ರಶ್ನೆ ರಾಜ್ಯದಲ್ಲಿ ಸಾವಯವ ಗೊಬ್ಬರ ಉಪಯೋಗವನ್ನು ಎಷ್ಟು ಜನ ರೈತರು ಮಾಡುತ್ತಿರುವರು ಎಂದು. ಅದಕ್ಕೆ ಸಮಗ್ರವಾಗಿ ಪ್ರಚಾರಂಧೋಳನದ ಕೆಲಸವನ್ನು ಏನಾದರೂ ಮಾಡುತ್ತಿದ್ದಾರೆಯೋ ಎನ್ನುವ ಪ್ರಶ್ನೆಗೆ ಅವರು ಕೊಟ್ಟಿರುವಂತಹ ಉತ್ತರವನ್ನು ನೋಡದರೆ ನೂರಕ್ಕೆ ನೂರು ಸತ್ಯಕ್ಕೆ ದೂರವಾದಂತಹ ಉತ್ತರವನ್ನು ಕೊಟ್ಟಿದ್ದಾರೆ. ನೂರಕ್ಕೆ ನೂರು ಸತ್ಯಕ್ಕೆ ದೂರವಾದಂತಹ ಉತ್ತರವನ್ನು ಕೊಡುವುದಕ್ಕೆ ಕಾರಣವೇನು ಎಂದರೆ ಬಹುಶಃ ನಾನು ಹಿಂದುಗಡೆ ತಿರುಗಿಸಿ ಇಂಗ್ಲೀಷ್‌ನಲ್ಲಿ ಅಚ್ಚು ಆಗಿರುವುದನ್ನು ನೋಡಿದರೆ ಆರ್ಗಾನಿಕ್ ಮೆನ್ಯೂರ್ಸ್ ಎಂದು ಕಲ್ಪನೆ ಮಾಡಿಕೊಂಡಿದ್ದಾರೆಂದು ಕಾಣುತ್ತದೆ. ನನಗೆ ಅನಿಸುತ್ತದೆ, ಅಚ್ಚ ಕನ್ನಡದಲ್ಲಿ ಪ್ರಶ್ನೆಗಳನ್ನು ಕೇಳಿದಾಗ ಈ ರೀತಿಯಾದ ತದ್ವಿರುದ್ಧವಾದಂತಹ ಉತ್ತರಗಳು ಬರತ್ತವೆ ಎನ್ನತಕ್ಕ ಭಾವನೆ ಇದೆ. ಅವರು ಮಿಸ್ಟೇಕ್ ಮಾಡಿಕೊಂಡಿರತಕ್ಕದ್ದು ಆರ್ಗಾನಿಕ್ ಮೆನ್ಯೂರ್ಸ್‌ಗೆ ಸಂಬಂಧಪಟ್ಟಂತಹ ಉತ್ತರವನ್ನು ಕೊಟ್ಟಿದ್ದಾರೆ. ಇದು ಸಾವಯವ ಗೊಬ್ಬರ ಇರಬಹುದು ಅಥವಾ ಕಾಂಪೋಸ್ಟ್ ನಿಂದ ಬರತಕ್ಕ ಗೊಬ್ಬರಗಳಿಗೆ ಪ್ರಚಾರ ಮಾಡಲಿಕ್ಕ ಏನು ಕಾರ್ಯಕ್ರಮ ಹಾಕಿಕೊಂಡಿದ್ದಾರೆ ಎನ್ನುವುದೇ ನನ್ನ ಮೂಲ ಪ್ರಶ್ನೆಯ ಉದ್ದೇಶ. ಅದನ್ನು ಅರ್ಥಮಾಡಿಕೊಳ್ಳದೇ ಆರ್ಗಾನಿಕ್ ಮೆನ್ಯೂರ್ಸ್ ಬಗ್ಗೆ ಉತ್ತರವನ್ನು ಕೊಟ್ಟಿದ್ದಾರೆ. ನನಗೆ ಅನಿಸುತ್ತದೆ.

Mr. SPEAKER : were you a student of chemistry?

ಶ್ರೀ ಬಿ.ಟಿ. ಜಯಚಂದ್ರ : ಹೌದು, ಬಿಎಸ್‌ಸಿನಲ್ಲಿ ಕೆಮಿಸ್ಟ್ರಿ.

Mr. SPEAKER : What is the difference between this and organic?

ಶ್ರೀ ಟಿ.ಬಿ. ಜಯಚಂದ್ರ : ಆರ್ಗಾನಿಕ್ ಮೆನ್ಯೂರ್ಸ್ ಹಾಕುವುದರಿಂದ ಪರಿಸ್ಥಿತಿ ಏನಾಗುತ್ತದೆ ಎಂದರೆ, ಮಣ್ಣಿನ ಗುಣ ಹಾಳಾಗತಕ್ಕಂಥ ಮತ್ತು ನೀರಿನ ಗುಣ ಕೂಡ ಹಾಳಾಗತಕ್ಕಂಥ ಸಂದರ್ಭ ಇರುವುದರಿಂದ ಇದು ಹೆಚ್ಚು ಪ್ರಚಾರ ಆಗಬೇಕಾಗಿರತಕ್ಕದ್ದು, ತಿಪ್ಪೆಯಿಂದ ಮತ್ತು ಎರೆ ಹುಎಗವಿನಿಂದ ಬರತಕ್ಕ ಗೊಬ್ಬರ ಅಂದರೆ ಕಾಂಪೋಸ್ಟ್, ಆ ಗೊಬ್ಬರಕ್ಕೆ ಹೆಚ್ಚು ಒತ್ತು ಕೊಡಬೇಕಾಗುತ್ತದೆ. ಈಗ ಏನಾಗಿದೆ ಎಂದರೆ.

Mr. SPEAKER : The chemical ingredient of compost manure and organic manure is not of much difference.

o Sri T.B. JAYACHANDRA : Even then, this is in the direct form ಅದರಲ್ಲಿ ಏನಾಗುತ್ತದೆ ಎಂದರೆ ಆರ್ಗಾನಿಕ್ ಕೆಮಿಕಲ್ಸ್‌ನಲ್ಲಿ it is injurious to health of the plants ಎನ್ನತಕ್ಕದ್ದು ನಮಗೆ ಇನ್ನೂ ಅಷ್ಟು ಗೊತ್ತಿಲ್ಲ, ಅದರಲ್ಲಿಯೂ ನಮ್ಮ ಭಾರತ ದೇಶದಲ್ಲಿ ಬಳಕೆ ಆಗುತ್ತಿರುವುದನ್ನು ನೋಡಿದಾಗ ಎಲ್ಲಾ ಸಬ್‌ಸ್ಟ್ಯಾಂಡರ್ಸ್,

ಶ್ರೀ ಆರ್.ಎಲ್. ಜಾಲಪ್ಪ : ನನ್ನ ಸ್ನೇಹಿತರು ಸ್ವಲ್ಪ ಕನ್‌ಫ್ಯೂಸ್ ಮಾಡಿಕೊಂಡಹಾಗೆ ಕಾಣುತ್ತದೆ. ಆರ್ಗಾನಿಕ್ ಮೆನ್ಯೂರ್ ಎಂದರೆ ಸಾವಯವ ಗೊಬ್ಬರಗಳು ಎಂದು. ಇನ್ ಆರ್ಗಾನಿಕ್ ಮೆನ್ಯೂರ್, ಕೆಮಿಕಲ್ ಫರ್ಟಿಲೈಸರ್ಸ್ ತಾವು ಹೇಳಿದ ಹಾಗೆ ಮಣ್ಣಿನ ಗುಣ ಹೋಗುತ್ತದೆ. ಮಣ್ಣಿನಲ್ಲಿ ಫೋರ್ಸ್ ಇರುವುದಿಲ್ಲ, ಅದೆಲ್ಲಾ ನೀವು ಹೇಳುತ್ತಿರುವುದನ್ನು ನಾನು ಒಪ್ಪಿಕೊಳ್ಳುತ್ತೇನೆ. when use only chemical fertilisers, not this organic manures . ಈಗ ತಮಗೆ ಗೊತ್ತಿದೆ. ಹತ್ತಾರು ವರ್ಷಗಳಿಂದ

20-30 ವರ್ಷಗಳಿಂದ ಕಾಂಪೋಸ್ಟ್ ಗೊಬ್ಬರ ಮಾಡಿ ಮಾಡಿ ಎಂದು ಹೇಳುತ್ತಿದ್ದೇವೆ ಅದನ್ನು ರೈತರು ಕಿವಿಗೆ ಹಾಕಿಕೊಳ್ಳುತ್ತಿಲ್ಲ. ಈಗ ಅದನ್ನು ವಿಧಿ ಇಲ್ಲದೆ ಇನ್ನು ಮೇಲೆ ಅವರು ಆರ್ಗಾನಿಕ್ ಮೆನ್ಯೂರ್ ಹಾಕಲೇಬೇಕಾಗುತ್ತದೆ. ಏಕೆಂದರೆ ಫರ್ಟಿಲೈಸರ್ಸ್ ಬೆಲೆ ಜಾಸ್ತಿ ಆಗುತ್ತಾ ಇದೆ. ಈಗ ಹಳೆಯ ಕಾಲದಲ್ಲಿ ಏನು ಮೆತೆಡ್ ಇತ್ತು ಕೆರೆಗಳಲ್ಲಿ ಮಣ್ಣು ಹೊಡೆಯುವುದನ್ನು ನಾವು ಬಿಟ್ಟು ಬಿಟ್ಟಿವು. ಗೋಡು ಮಣ್ಣು ಹೊಡೆಯುವುದನ್ನು ಬಿಟ್ಟಿದ್ದೇವೆ. ಬರೇ ಕೆಮಿಕಲ್ ಫರ್ಟಿಲೈಸರ್ಸ್ ಯೂಸ್ ಮಾಡಿ ಬಹಳ ದಿವಸ ವ್ಯವಸಾಯ ಮಾಡುವುದಕ್ಕೆ ಆಗುವುದಿಲ್ಲ ಎನ್ನುವುದು ರೈತರಿಗೆ ಈಗ ಅರ್ಥ ಆಗಿದೆ. ಹೆಚ್ಚು ಹೆಚ್ಚು ಪ್ರಚಾರಕ್ಕೆ ಏನು ಕ್ರಮ ಬೇಕೋ ಮಾಡುತ್ತೇವೆ. ಎರೆಹುಳಕ್ಕೆ ಕೆಲವು ಕಡೆ ಸಬ್ಸಿಡಿ ಕೂಡ ಕೊಡುತ್ತಿದ್ದೇವೆ. ಎರೆಹುಳದ ಬಗ್ಗೆ ತಾವೇನು ಹೇಳುತ್ತಿದ್ದೀರಿ. ಅದು ಬಹಳ ಒಳ್ಳೆಯ ಸಜೆಕ್ಷನ್ ಅದಕ್ಕೆ ಸಬ್ಸಿಡಿ ಕೂಡ ಕೊಡಬೇಕೆಂದು ಹೇಳಿ ಒಂದು ತಾಲ್ಲೂಕಿಗೆ 20-30 ಜನರಿಗೆ ಸಬ್ಸಿಡಿ ಕೊಟ್ಟು ಅದನ್ನು ಕೂಡ ಬೆಳೆಸಬೇಕು, ಆಂತಹ ಗೊಬ್ಬರಗಳನ್ನು ಉಪಯೋಗಿಸಬೇಕು ಎಂದು ಹೇಳಿ ಸರ್ಕಾರ ಆ ದಿಸೆಯಲ್ಲಿ ಈಗ ಕಾರ್ಯಕ್ರಮಗಳನ್ನು ಕೈಗೊಂಡಿದೆ.

ಶ್ರೀ ಟಿ.ಬಿ. ಜಯಚಂದ್ರ : ಸಬ್ಸಿಡಿ ಕೊಡತಕ್ಕ ಪದ್ಧತಿ ಇದೆ. ಆದರೆ ಅದನ್ನು ಎಲ್ಲೂ ಕೊಟ್ಟಿಲ್ಲ. ಇಲ್ಲಿಯವರೆಗೆ ಆ ಪದ್ಧತಿ ಜಾರಿಗೆ ಬಂದಿಲ್ಲ. ದಯಮಾಡಿ ನೀವು ಕೊಡತಕ್ಕ ಸಬ್ಸಿಡಿ ಕೊನೆಯಪಕ್ಷ ಅರ್ಧದಷ್ಟಾದರೂ ಕೊಟ್ಟರೆ ಅದು ಪ್ರಚಾರಕ್ಕೆ ಅನುಕೂಲ ಆಗುತ್ತದೆ ಎನ್ನುವ ದೃಷ್ಟಿಯಿಂದ ಈ ಪ್ರಶ್ನೆ ಕೇಳಿರತಕ್ಕದ್ದು. ದಯಮಾಡಿ ಇದರ ಬಗ್ಗೆ ಯೋಚಿಸಿ . ಸ್ವತಃ ತಾವು ರೈತರಾದ್ದರಿಂದ ಈ ಬಗ್ಗೆ ಹೆಚ್ಚಾಗಿ ಹೇಳತಕ್ಕ ಅವಶ್ಯಕತೆ ಇಲ್ಲ. ನೀವು ಇದರ ಬಗ್ಗೆ ಹೆಚ್ಚಿನ ಒಂದು ಕಾರ್ಯಕ್ರಮವನ್ನು ಹಾಕಿದರೆ ಬಹಳ ಸೂಕ್ತ ಎಂಬ ಒಂದು ಸಲಹೆಯನ್ನು ಕೊಡುತ್ತೇನೆ.

ಶ್ರೀ ಆರ್.ಎಲ್. ಜಾಲಪ್ಪ : ಆಯಿತು, ಇದನ್ನು ಒಪ್ಪಿಕೊಳ್ಳುತ್ತೇನೆ.

ಮೈಸೂರು ಕೆಬಿಬಿಸಿ ಮುಚ್ಚಿರುವ ಬಗ್ಗೆ.

302 - ಶ್ರೀ ಹೆಚ್.ಎನ್. ಶಂಕರಲಿಂಗೇಗೌಡ : ಮಾನ್ಯ ಕಾರ್ಮಿಕ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಮೈಸೂರು ಕರ್ನಾಟಕ ಬಾಲ್ ಬೇರಿಂಗ್ ಕಂಪನಿ (ಕೆಬಿಬಿಸಿ) ಕಾರ್ಖಾನೆಯು ಮುಚ್ಚಿ ಇಲ್ಲಿನ ಕಾರ್ಮಿಕರು ಬೀದಿಪಾಲಾಗಿರುವ ವಿಷಯ ಸರ್ಕಾರದ ಗಮನಕ್ಕೆ ಬಂದಿದೆಯೆ?*

ಆ) *ಈ ಕಾರ್ಖಾನೆಯನ್ನು ತೆರೆಯುವ ಬಗ್ಗೆ ಸರ್ಕಾರ ಕೈಗೊಂಡಿರುವ ಕ್ರಮಗಳೇನು?*

ಇ) *ಈ ಕಾರ್ಖಾನೆಯನ್ನು ತೆರಸಲು ಎಷ್ಟು ಕಾಲಾವಕಾಶ ಬೇಕಾಗುವುದು?*

ಶ್ರೀ ಸಿ. ಗುರುನಾಥ್ (ಕಾರ್ಮಿಕ ಸಚಿವರು) :

ಅ) ಬಂದಿದೆ

ಆ) ಕಾರ್ಖಾನೆ ಪುನರಾರಂಭಿಸುವ ಬಗ್ಗೆ ಸಂಧಾನ ಸಭೆ ನಡೆಸಿ ಒಪ್ಪಂದವೊಂದನ್ನು ಮಾಡಲಾಯಿತು. ಆದರೆ ಒಪ್ಪಂದವನ್ನು ಅನುಷ್ಠಾನಕ್ಕೆ ತರದೆ ಇರುವುದರಿಂದ ಆಡಳಿತ ವರ್ಗದವರ ವಿರುದ್ಧ ಮೊಕದ್ದಮೆ ಹೂಡಲು ಕ್ರಮ ಕೈಗೊಳ್ಳಲಾಗುತ್ತಿದೆ.

ಇ) ಕಾರ್ಖಾನೆಯನ್ನು ಪುನರಾರಂಭಿಸುವ ಬಗ್ಗೆ ನಿಗದಿತ ಸಮಯವನ್ನು ಹೇಳಲು ಬರುವುದಿಲ್ಲ. ಆದಾಗ್ಯೂ ಸದರಿ ಕಾರ್ಖಾನೆಯನ್ನು ಪುನಃ ಪ್ರಾರಂಭಿಸಲು ಕೂಡಲೆ ಕ್ರಮ ಕೈಗೊಳ್ಳಲಾಗುವುದು.

ಶ್ರೀ ಎಚ್.ಎಸ್. ಶಂಕರಲಿಂಗೇಗೌಡ : ಮಾನ್ಯ ಅಧ್ಯಕ್ಷರೆ ಉತ್ತರ ಸಮರ್ಪಕವಾಗಿಲ್ಲ. ಕಾರಣ ಏನೆಂದರೆ ಈ ಮಹತಾ ಗುಂಪಿನವರು ಕರ್ನಾಟಕದಲ್ಲಿ ಹಲವಾರು